ಕ್ರಮ ಸಂಖ್ಯೆ : 15

**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನಸಭೆ**

**ಹದಿನಾಲ್ಕನೇ ಅಧಿವೇಶನ**

# ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2017

**(2017ರ ವಿಧಾನಸಭೆಯ ವಿಧೇಯಕ ಸಂಖ್ಯೆ-33)**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ನ್ನು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ನ್ನು (2016ರ ಕರ್ನಾಟಕ ಅಧಿನಿಯಮ 16) ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆಂಟನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ (ತಿದ್ದುಪಡಿ) ಅಧಿನಿಯಮ, 2017 ಎಂದು ಕರೆಯತಕ್ಕದ್ದು.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. 15ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016ರ (2016ರ ಕರ್ನಾಟಕ ಅಧಿನಿಯಮ 16) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 15ನೇ ಪ್ರಕರಣದ (3)ನೇ ಉಪಪ್ರಕರಣದಲ್ಲಿ "ಅರವತ್ತೈದು" ಎಂಬ ಪದಕ್ಕೆ "ಅರವತ್ತೇಳು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು ಮತ್ತು ಹಾಗೆ ಯಾವಾಗಲೂ ಪ್ರತಿಯೋಜಿಸಲಾಗಿದೆ ಎಂದು ಭಾವಿಸತಕ್ಕದ್ದು.

**3. 17ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,-

(ಎ) (1)ನೇ ಉಪಪ್ರಕರಣದ ಪರಂತುಕದಲ್ಲಿ "ವಿಶ್ವವಿದ್ಯಾಲಯದಲ್ಲಿ ಇರುವಂಥ" ಎಂಬ ಪದಗಳ ತರುವಾಯ "ಪ್ರಾಧ್ಯಾಪಕರಾಗಿರುವ ಸಂದರ್ಭದಲ್ಲಿ ರಿಜಿಸ್ಟ್ರಾರ್‌ರವರನ್ನು ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

(ಬಿ) (2)ನೇ ಉಪಪ್ರಕರಣದಲ್ಲಿ "ವಿಶ್ವವಿದ್ಯಾಲಯದಲ್ಲಿಯ" ಎಂಬ ಪದದ ತರುವಾಯ "ಪ್ರಾಧ್ಯಾಪಕರಾಗಿರುವ ಸಂದರ್ಭದಲ್ಲಿ ರಿಜಿಸ್ಟ್ರಾರ್‌ರವರನ್ನು ಅಥವಾ" ಎಂಬ ಪದಗಳನ್ನು ಸೇರಿಸತಕ್ಕದ್ದು.

# ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಸ್ಟಾಂಪು ಅಧಿನಿಯಮ, 1957ನ್ನು (1957ರ ಕರ್ನಾಟಕ ಅಧಿನಿಯಮ 34) ಈ ಮುಂದಿನವುಗಳಿಗೆ ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಿದೆ, ಎಂದರೆ:-

(i) ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ, 2000ರಲ್ಲಿರುವಂತೆ ಕುಲಪತಿಗಳ ವಯೋಮಿತಿಯೊಂದಿಗೆ ಅನುರೂಪವಾಗಿರುವಂತೆ, ಕುಲಪತಿಯವರ ಪದವನ್ನು ಹೊಂದಲು ಮೇಲಿನ ವಯೋಮಿತಿಯನ್ನು ಅರವತ್ತೇಳು ವರ್ಷಗಳಿಗೆ ಹೆಚ್ಚಿಸಲು; ಮತ್ತು

(ii) ಕುಲಪತಿಯ ಹುದ್ದೆಯು ತಾತ್ಕಾಲಿಕವಾಗಿ ಖಾಲಿಯಾದಲ್ಲಿ ಮತ್ತು ಭರ್ತಿಯಾಗದೇ ಉಳಿದಲ್ಲಿ, ಆತನು ಪ್ರಾಧ್ಯಾಪಕನಾಗಿರುವ ಸಂದರ್ಭದಲ್ಲಿ ರಿಜಿಸ್ಟ್ರಾರನನ್ನು, ಕುಲಪತಿಯ ಕರ್ತವ್ಯಗಳನ್ನು ನೆರವೇರಿಸಲು, ಆತನನ್ನು ಪದನಾಮೀಕರಿಸಲು ಅಥವಾ ನೇಮಕ ಮಾಡಲು,

– ತಿದ್ದುಪಡಿ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

**ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಹೆಚ್. ಕೆ. ಪಾಟೀಲ್**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮಂತ್ರಿಗಳು

**ಎಸ್. ಮೂರ್ತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಸಭೆ

## ಅನುಬಂಧ

### ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ಅಧಿನಿಯಮ. 2016ರ (2016ರ ಕರ್ನಾಟಕ ಅಧಿನಿಯಮ 16) ಉದ್ಧೃತ ಭಾಗ

Xx xx xx

**15. ಕುಲಪತಿಗಳು.–**

Xx xx xx

(3) ಕುಲಪತಿಗಳು ಶೈಕ್ಷಣಿಕ ವ್ಯಕ್ತಿ ಮತ್ತು ಪ್ರಾಧ್ಯಾಪಕರಾಗಿರತಕ್ಕದ್ದು, ಅವರು ನಾಲ್ಕು ವರ್ಷಗಳ ಅವಧಿಯವರೆಗೆ ಅಥವಾ ಅವರ ವಯಸ್ಸು ಅರವತ್ತೈದು ವರ್ಷವಾಗುವವರೆಗೆ, ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಹುದ್ದೆಯನ್ನು ಹೊಂದಿರತಕ್ಕದ್ದು.

Xx xx xx

**17. ಕುಲಪತಿಯವರ ಸ್ಥಾನವು ಖಾಲಿಯಿರುವಾಗ ಕೆಲಸದ ವ್ಯವಸ್ಥೆ.–** (1) ರಜೆ, ಖಾಯಿಲೆ ಅಥವಾ ಇನ್ನಾವುದೇ ಕಾರಣದಿಂದಾಗಿ ಕುಲಪತಿಯವರ ತಾತ್ಕಾಲಿಕ ಗೈರುಹಾಜರಿಯಲ್ಲಿ, ಕುಲಾಧಿಪತಿಯವರು, ಕುಲಪತಿಯವರ ಕರ್ತವ್ಯಗಳನ್ನು ನಡೆಸಿಕೊಂಡು ಹೋಗುವುದಕ್ಕೆ ತಾವು ಸೂಕ್ತವೆಂದು ಭಾವಿಸುವಂಥ ವ್ಯವಸ್ಥೆಯನ್ನು ಮಾಡಬಹುದು:

ಪರಂತು, ಕುಲಾಧಿಪತಿಯವರು ಅಂಥ ವ್ಯವಸ್ಥೆಯನ್ನು ಮಾಡುವವರೆಗೆ ಕುಲಪತಿಯವರು ಒಂದು ತಿಂಗಳು ಮೀರದಂಥ ಅವಧಿಗೆ ಅಥವಾ ಕುಲಾಧಿಪತಿಯವರು ವ್ಯವಸ್ಥೆ ಮಾಡುವವರೆಗೆ, ಅವರೆಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ವಿಶ್ವವಿದ್ಯಾಲಯದಲ್ಲಿ ಇರುವಂಥ ನಿರ್ದೇಶಕರು, ಶಾಲೆಗಳ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಅಥವಾ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಇವರುಗಳ ಪೈಕಿ ಅತ್ಯಂತ ಹಿರಿಯ ನಿರ್ದೇಶಕರನ್ನು ಕುಲಪತಿಯವರ ಪ್ರಸಕ್ತ ಕರ್ತವ್ಯಗಳ ಪ್ರಭಾರವಹಿಸಲು ಹೆಸರಿಸಬಹುದು.

(2) ಕುಲಪತಿಯವರ ಸ್ಥಾನವು ಭರ್ತಿಯಾಗದೆ ಖಾಲಿ ಉಳಿದಿರುವ ಅವಧಿಯವರೆಗೆ, ಕುಲಾಧಿಪತಿಯವರು ನೇಮಿಸಬಹುದಾದಂಥ, ವಿಶ್ವವಿದ್ಯಾಲಯದಲ್ಲಿಯ ನಿರ್ದೇಶಕರು, ಶಾಲೆಗಳ ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಅಥವಾ ನಿರ್ದೇಶಕರು, ಸಂಶೋಧನೆ, ಅನ್ವೇಷಣೆ ಮತ್ತು ಮೌಲ್ಯಮಾಪನಾ ಇವರುಗಳ ಪೈಕಿ ಅತ್ಯಂತ ಹಿರಿಯ ನಿರ್ದೇಶಕರು ಕುಲಪತಿಯಾಗಿ ಕಾರ್ಯ ನಿರ್ವಹಿಸತಕ್ಕದ್ದು ಮತ್ತು ಹಾಗೆ ನೇಮಕಗೊಂಡ ವ್ಯಕ್ತಿಯು, ಕುಲಪತಿಯವರ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಎಲ್ಲಾ ವಿಶೇಷಾಧಿಕಾರಗಳಿಗೂ ಹಾಗೂ ಈ ಕುರಿತು ರಚಿಸಲಾದ ವಿನಿಯಮಗಳಾವುವಾದರೂ ಇದ್ದಲ್ಲಿ, ಅವುಗಳಿಗನ್ವಯ ಕುಲಾಧಿಪತಿಯವರು ನಿರ್ಧರಿಸಬಹುದಾದಂಥ ಉಪಲಬ್ಧಿಗಳು ಮತ್ತು ಭತ್ಯೆಗಳಿಗೂ ಹಕ್ಕುಳ್ಳವರಾಗಿರತಕ್ಕದ್ದು.

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು, ಏ7, ಕಾಸೂ , –ಪ್ರತಿಗಳು 1000, 16ನೇ ಜೂನ್ 2017

Serial No: (15)

KARNATAKA LEGISLATIVE ASSEMBLY
FOURTEENTH LEGISLATIVE ASSEMBLY
FOURTEENTH SESSION

# THE KARNATAKA STATE RURAL DEVELOPMENT AND PANCHAYAT RAJ UNIVERSITY (AMENDMENT) BILL, 2017

**(L.A. Bill No. 33 of 2017)**

A Bill to amend the Karnataka State Rural Development and Panchayat Raj University Act, 2016.

Whereas, it is expedient to amend the Karnataka State Rural Development and Panchayat Raj University Act, 2016 (Karnataka Act 16 of 2016) for the purposes hereinafter appearing;

Be it enacted by the Karnataka State Legislature in the Sixty Eighth year of the Republic of India, as follows:-

**1. Short title and commencement.-** (1) This Act may be called the Karnataka State Rural Development and Panchayat Raj University (Amendment) Act, 2017.

(2) It shall come into force at once.

**2. Amendment of section 15.-** In the Karnataka State Rural Development and Panchayat Raj University Act, 2016 (Karnataka Act 16 of 2016) (hereinafter referred to as the Principal Act), in section15, in sub-section(3) for the words “Sixty five years”, the words “Sixty seven years”, shall be and shall always be deem to have been substituted.

**3. Amendment of section17.-** In section 17 of the Principal Act,-

(a) in sub-section (1), in the proviso, after the word “designate”, the words “Registrar in case if he is a Professor or” shall be inserted; and

(b) in sub-section (2), after the word “unfilled” the words “Registrar in case if he is a Professor or” shall be inserted.

**STATEMENT OF OBJECTS AND REASONS**

It is considered necessary to amend the Karnataka State Rural Development and Panchayat Raj University Act, 2016 (Karnataka Act 16 of 2016),-

(i) to enhance the upper age limit to hold office of Vice Chancellor to sixty seven years which is in conformity with the age limit of Vice Chancellors in the Karnataka State Universities Act, 2000; and

(ii) to make provisions also to designate or to appoint the Registrar in case if he is a Professor, to carry out the duties of the Vice Chancellor if the post of Vice Chancellor is temporarily vacant and if remains unfilled.

Hence, the Bill.

**FINANCIAL MEMORANDUM**

There is no extra expenditure involved in the proposed legislative measure.

**H.K.PATIL**
Minister for Rural Development
and Panchayat Raj

**S. Murthy**
Secretary (I/c)
Karnataka Legislative Assembly

**ANNEXURE**

**EXTRACT FROM THE KARNATAKA STATE RURAL DEVELOPMENT AND PANCHAYAT RAJ UNIVERSITY ACT, 2016 (KARNATAKA ACT 16 OF 2016)**

**XX XX XX**

**15. Vice Chancellor.-**

**XX XX XX**

(3) The Vice Chancellor who shall be an academic person and a Professor, shall hold office for a term of four years or till he attains the age of sixty five years, whichever is earlier.

**XX XX XX**

**17. Arrangement of work during vacancy in the office of the Vice-Chancellor.- (1)** During the temporary absence of the Vice-Chancellor by reason of leave, illness or any other cause, the Chancellor may make such arrangements as he deems fit for carrying on the duties of the Vice-Chancellor.

Provided that, pending the making of such arrangements by the Chancellor, the Vice-Chancellor may designate the senior most Director amongst the Director of Training, Publication and Supervision of schools or the Director, Centre for Research, Innovation and Evaluation, to be incharge of the current duties of the Vice-Chancellor for a period not exceeding one month or till arrangements are made by the Chancellor, whichever is earlier.

(2) During the period when a vacancy in the office of the Vice-Chancellor remains unfilled, the senior most Director amongst the Director of Training, Publication and Supervision of all schools or the Director, Centre for Research, Innovation and Evaluation, as the Chancellor may appoint shall act as Vice-Chancellor and the person so appointed shall have all the powers and shall be entitled to all the privileges of the Vice-Chancellor and to such emoluments and allowances as may be determined by the Chancellor in accordance with the Regulations, if any, framed in this behalf.

**XX XX XX**

Government Press, Vikasa Soudha Unit, Bengaluru 19th June, 2017 P7, W.D., Copies 1000